ಒಬೆರಾಯ್ ಎಂಬ ವಾಸ್ತುಶಿಲ್ಪಿಗಳಿಗೆ ಈ ಬೃಹತ್ ಕೆಲಸವನ್ನು ವಹಿಸಲಾಯ್ತು. 1661ರಿಂದ 1678ರ ನಡುವೆ ಈ ಕೆಲಸ ನಡೆಯಿತು.


ರಾಜ ತನ್ನ ಹೆಚ್ಚಿನ ಸಮಯವನ್ನು ಇಲ್ಲಿಯೇ ಕಳೆಯುತ್ತಿದ್ದುದರಿಂದ, ಮಂತ್ರಿಗಳು, ಅಧಿಕಾರಿಗಳು ಆಡಳಿತದ ಕೆಲಸಗಳಿಗಾಗಿ ಪ್ಯಾರಿಸ್‌ನಿಂದ ಓಡಾಡಬೇಕಾಗುತ್ತಿತ್ತು. ಅನನುಕೂಲ ತಪ್ಪಿಸಲು ಈ ಸ್ಥಳದಲ್ಲಿ ಆಡಳಿತ ಕಟ್ಟಡಗಳನ್ನು ನಿರ್ಮಿಸುವ ಅವಶ್ಯಕತೆ ಬಿದ್ದಿತು. 1682ರಲ್ಲಿ ಹದಿನಾಲ್ಕನೆಯ ಲೂಯಿಸ್ ತನ್ನ ವಾಸ ಮತ್ತು ಆಡಳಿತವನ್ನು ಸಂಪೂರ್ಣವಾಗಿ ಈ ಸ್ಥಳದಿಂದಲೇ ನಿರ್ವಹಿಸಲು ಶಕ್ತನಾದನು. ಹಾರ್ಡೊಯಿನ್ ಮಾನ್ಸರ್ಟ್ ಮತ್ತು ರಾಬರ್ಟ್ ಡಿ ಕಾಟ್ ಎಂಬಿಬ್ಬರು ವಾಸ್ತುಶಿಲ್ಪಿಗಳಿಗೆ ರಾಜಮನೆತನದವರ ಪ್ರಾರ್ಥನೆಗಾಗಿ ಒಂದು ಚರ್ಚ್ ನಿರ್ಮಿಸಿಕೊಡುವ ಜವಾಬ್ದಾರಿ ವಹಿಸಲಾಗಿತ್ತು.

1710ರಲ್ಲಿ ಆ ಕಾರ್ಯವೂ ಮುಗಿಯಿತು. ಮುಂದಿನ ದಿನಗಳಲ್ಲಿಯೂ ಅನೇಕ ರಾಜರು ತಮ್ಮ ಕೊಡುಗೆಯನ್ನು ನೀಡುತ್ತಲೇ ಹೋದರು. ಹದಿನಾರನೆಯ ಲೂಯಿಸ್‌ನ ವಿವಾಹ ಆಸ್ಟ್ರಿಯಾದ ಮೇರಿ ಆಂಟೋನಿಯಾ ಜತೆಗೆ ನಡೆದಾಗ ಆ ಸಂದರ್ಭಕ್ಕಾಗಿ 1682ರಲ್ಲಿ ರಾಯಲ್ ಒಪೆರಾ ನಿರ್ಮಿಸಲಾಯಿತು. ಇದರ ನಿರ್ಮಾಣದ ಹೊಣೆಯನ್ನು ಏಂಜ್ ಜಾಕಸ್ ಗೇಬ್ರಿಯಲ್ ವಹಿಸಿಕೊಂಡು ಅಚ್ಚುಕಟ್ಟಾಗಿ ಪೂರ್ಣಗೊಳಿಸಿದನು. ಹೊಸ ಒಪೆರಾವನ್ನು ಸಂಪೂರ್ಣವಾಗಿ ಮರದಿಂದ ನಿರ್ಮಿಸಲಾಗಿದೆ. ಇದು ಉತ್ತಮ ಗುಣಮಟ್ಟದ ಅಕೌಸ್ಟಿಕ್ಸ್ ಸಹ ಹೊಂದಿದೆ. ಮೇಲ್ಛಾವಣಿಯನ್ನು ಅಪೊಲೊ ಮತ್ತಿತರ ಚಿತ್ರಕಲಾಕೃತಿಗಳಿಂದ ಅಲಂಕರಿಸಲಾಗಿದೆ.

ರಾಜರ ಈ ರೀತಿಯ ಆಡಂಬರದ ಖರ್ಚುಗಳಿಂದಾಗಿ ಫ್ರಾನ್ಸ್ ದೇಶದ ಅರ್ಥವ್ಯವಸ್ಥೆ ಕುಸಿದು, ಅಗತ್ಯ ವಸ್ತುಗಳ ಬೆಲೆಯಲ್ಲಿ ಗಮನಾರ್ಹ ಏರಿಕೆಯಾಗಿ, ಜನರಲ್ಲಿ ಅಸಮಾಧಾನ, ದೇಶದಲ್ಲಿ ಅರಾಜಕತೆ ಉಂಟಾಯಿತು. 1789ರಲ್ಲಿ ಪ್ಯಾರಿಸ್ ನಗರದಲ್ಲಿ ಫ್ರೆಂಚ್ ಕ್ರಾಂತಿಯ ಕಾವು ಏರುತ್ತಿದ್ದಂತೆ ರಾಜ ರಾಣಿಯರು ಅರಮನೆಯೊಳಗೇ ಬಂಧಿಗಳಾಗಬೇಕಾಯಿತು. 1789ರ ಅಕ್ಟೋಬರ್ 5ನೇ ತಾರೀಕು ಸಹಸ್ರಾರು ಜನರು ವರ್ಸೈಲ್ಸ್‌ಗೆ ದಾಳಿಯಿಟ್ಟರು. ಸಾಕಷ್ಟು ಲೂಟಿಯೂ ಆ ಸಮಯದಲ್ಲಿ ನಡೆಯಿತು. ಅರಮನೆಯನ್ನು ಮುಚ್ಚಿ, ರಾಜ ಪರಿವಾರವು ಪ್ಯಾರಿಸ್‌ಗೆ ತೆರಳುವುದು ಅನಿವಾರ್ಯವಾಯಿತು.

## ವರ್ಸೈಲ್ಸ್ ಪುನರುತ್ಥಾನ

1804ರಲ್ಲಿ ನೆಪೋಲಿಯನ್ ಬೊನಾಪಾರ್ಟೆ ಫ್ರಾನ್ಸ್‌ನ ಚಕ್ರಾಧಿಪತಿಯಾಗಿ ಅಧಿಕಾರ ವಹಿಸಿಕೊಂಡಾಗ ವರ್ಸೈಲ್ಸ್ ಅರಮನೆಯನ್ನು ಮತ್ತೆ ಸಿಂಗರಿಸಲು, ಹೊಸ ಪೀಠೋಪಕರಣಗಳಿಂದ ಅಲಂಕರಿಸಲು ತೀರ್ಮಾನಿಸಿದನಾದರೂ ಅತಿಯಾದ ಖರ್ಚು ವೆಚ್ಚದ ಕಾರಣ ಪೂರ್ಣ ಪ್ರಮಾಣದಲ್ಲಿ ಸಾಧ್ಯವಾಗಲಿಲ್ಲ. 1830ರಲ್ಲಿ ಅಧಿಕಾರಕ್ಕೆ ಬಂದ ರಾಜ ಲೂಯಿಸ್ ಫಿಲಿಪ್



ಕನ್ನಡಿಗಳ ಹಜಾರದ ನೋಟ



ರಾಜಾ 14ನೇ ಲೂಯಿಸ್‌ನ ಭವ್ಯ ಪ್ರತಿಮೆ

ವರ್ಸೈಲ್ಸ್‌ನಲ್ಲಿ ವಾಸ ಮಾಡುವ ಬದಲು ಅದನ್ನು ಫ್ರಾನ್ಸಿನ ಇತಿಹಾಸದ ವಸ್ತು ಸಂಗ್ರಹಾಲಯವಾಗಿ ಪರಿವರ್ತಿಸುವಂತೆ ಆಜ್ಞಾಪಿಸಿದ. 1837ರ ಜೂನ್ 30ರಂದು ಈ ವಸ್ತು ಸಂಗ್ರಹಾಲಯ ಉದ್ಘಾಟನೆಯಾಯಿತು. ನಂತರ ಅಮೆರಿಕದ ಇತಿಹಾಸಜ್ಞ ಮತ್ತು ಕೋಟ್ಯಧಿಪತಿ ಜಾನ್ ಡಿ ರಾಕ್‌ಫೆಲ್ಲರ್ ಆ ಕಾಲದಲ್ಲೇ 21.66 ಲಕ್ಷ ಡಾಲರ್‌ಗಳಷ್ಟು ಹಣವನ್ನು ರಾಕ್‌ಫೆಲ್ಲರ್ ಪ್ರತಿಷ್ಠಾನದ ಮೂಲಕ ವರ್ಸೈಲ್ಸ್ ಅರಮನೆಯ ಪುನರುತ್ಥಾನಕ್ಕಾಗಿ ಕೊಡುಗೆ ನೀಡಿದ. 2003ರಲ್ಲಿ ವರ್ಸೈಲ್ಸ್ ಯೋಜನೆ (Grand Versailles project) ಪ್ರಾರಂಭವಾಗಿ ಹಂತ ಹಂತವಾಗಿ ಅರಮನೆ ಮತ್ತು ಅದರ ಸುತ್ತಲ ಉದ್ಯಾನವನದ ಪುನರುಜ್ಜೀವನ ಕಾರ್ಯ ನಡೆಯತೊಡಗಿತು. 2009ರಲ್ಲಿ ಈ ಯೋಜನೆ ಮುಕ್ತಾಯವಾಯಿತು. ಈಗ ವರ್ಸೈಲ್ಸ್ ಅರಮನೆಗಾಗಿಯೇ ಒಂದು ವಿಶೇಷ ಪ್ರಾಧಿಕಾರ ಕಾರ್ಯ ನಿರ್ವಹಿಸುತ್ತದೆ.

ವರ್ಸೈಲ್ಸ್ ಅರಮನೆಯು 17–18ನೇ ಶತಮಾನದ ಫ್ರೆಂಚ್ ಇತಿಹಾಸದ ದರ್ಶನವನ್ನು ನೋಡುಗರಿಗೆ ಮಾಡಿಸುತ್ತದೆ. ಇಂಗ್ಲಿಷಿನ 'ಯು' ಆಕಾರದ ಮೂರು ಮಹಡಿಗಳ ಕಟ್ಟಡ 67,000 ಚದರ ಮೀಟರುಗಳಷ್ಟು ವಿಸ್ತಾರ ಹೊಂದಿದ್ದು 700 ಕೋಣೆಗಳು, 2000ಕ್ಕೂ ಹೆಚ್ಚು ಕಿಟಕಿಗಳು, 1250 ಬೆಂಕಿಗೂಡುಗಳು ಮತ್ತು 67 ಕಡೆ ಮೆಟ್ಟಿಲುಗಳನ್ನು ಹೊಂದಿದೆ. ರಾಜನಿಗೆ ಮೀಸಲಾಗಿದ್ದ ಅರಮನೆಯ ಒಳಭಾಗವು ಆ ಕಾಲದಲ್ಲಿ ಗುರುತಿಸಲಾಗಿದ್ದ ಏಳು ಗ್ರಹಗಳು ಮತ್ತು ಅವಕ್ಕೆ ಸಂಬಂಧಿಸಿದ ಗ್ರೀಕ್ ದೇವತೆಗಳ ಹೆಸರನ್ನುಳ್ಳ ಏಳು ಕೋಣೆಗಳನ್ನು ಹೊಂದಿದೆ.

'ಗ್ಯಾಲರಿ ಡೆಸ್ ಗ್ಲೇಸಸ್' (ಹಾಲ್ ಆಫ್ ಮಿರರ್ಸ್) ವರ್ಸೈಲ್ಸ್‌ನಲ್ಲಿನ ಅತ್ಯಂತ ಪ್ರಸಿದ್ಧ ಕೋಣೆ. ಇದು 70 ಮೀಟರ್ (230 ಅಡಿ) ಗಿಂತ ಹೆಚ್ಚು ಉದ್ದ ಮತ್ತು 17 ವಿಶಾಲ ಕನ್ನಡಿಗಳಿಂದ ಕೂಡಿದೆ. ಕನ್ನಡಿಯು ಆ ಕಾಲದಲ್ಲಿ ಅತ್ಯಂತ ದುಬಾರಿ ವಸ್ತುವಾಗಿತ್ತು. ಘನ ಬೆಳ್ಳಿಯ ಪೀಠೋಪಕರಣಗಳೊಂದಿಗೆ ಸಜ್ಜುಗೊಳಿಸಲಾಗಿದ್ದ ಸಭಾಂಗಣವನ್ನು ಮೂಲತಃ ಲೆ ಬ್ರೂನ್ ವಿನ್ಯಾಸಗೊಳಿಸಿದ್ದ. ಈ ಸಭಾಂಗಣದಲ್ಲಿಯೇ 1919ರ ವರ್ಸೈಲ್ಸ್ ಒಪ್ಪಂದಕ್ಕೆ ಸಹಿ ಹಾಕಲಾಗಿದ್ದು, ಅದು ಮೊದಲ ವಿಶ್ವ ಸಮರವನ್ನು ಕೊನೆಗೊಳಿಸಿತು. ಆದರೆ ಯುದ್ಧದ ವೆಚ್ಚಗಳನ್ನು ಪಾವತಿಸಲು ಈ ಪೀಠೋಪಕರಣಗಳನ್ನು 1689ರಲ್ಲಿ ಕರಗಿಸಲಾಯಿತು.

ಹದಿನಾರನೆಯ ಲೂಯಿಸ್ ಅರಮನೆಯ ಹಿಂಬದಿಯ ಪೆಟಿಟ್ ಟ್ರೈನಾನ್ ಉದ್ಯಾನವನ್ನು ತನ್ನ ವಧು ಮೇರಿ ಆಂಟೊನೆಟ್‌ಗೆ ಉಡುಗೊರೆಯಾಗಿ ನೀಡಿದನು. ಫ್ರೆಂಚ್ ಶೈಲಿಯ ಉದ್ಯಾನದ ಬದಲಿಗೆ ಇಂಗ್ಲಿಷ್ ಶೈಲಿಯ ಭೂದೃಶ್ಯ ಉದ್ಯಾನವನ್ನು ವಿನ್ಯಾಸಗೊಳಿಸಲು ತೀರ್ಮಾನಿಸಿದ ಆಕೆ, ಈ ಕಾರ್ಯಕ್ಕಾಗಿ ವಾಸ್ತುಶಿಲ್ಪಿ ರಿಚರ್ಡ್ ಮಿಕ್ ಮತ್ತು ವರ್ಣಚಿತ್ರಕಾರ ಹಬರ್ಟ್ ರಾಬರ್ಟ್ ಅವರನ್ನು ನೇಮಿಸಿದಳು. ಪೆಟಿಟ್‌ನ ಅನತಿ ದೂರದಲ್ಲಿ ರಾಕ್ ಪೆವಿಲಿಯನ್ ಮತ್ತು 1777ರಲ್ಲಿ ನಿರ್ಮಿಸಲಾದ ಟೆಂಪಲ್ ಆಫ್ ಲವ್ ಗುಮ್ಮಟವನ್ನು ಕಾಣಬಹುದು. ಈ ಉದ್ಯಾನವನ ರಾಣಿಯ ಪ್ರೀತಿಪಾತ್ರ ಸ್ಥಳವಾಗಿದ್ದು, ಆಕೆ ತನ್ನ ಸಖಿಯರೊಂದಿಗೆ ಅಲ್ಲಿ ವಿಹರಿಸುತ್ತಿದ್ದಳಂತೆ.

1919ರಲ್ಲಿ ವರ್ಸೈಲ್ಸ್ ಪ್ಯಾರಿಸ್‌ನ ಉಪನಗರವಾದ ನಂತರ ಜನಸಂಖ್ಯೆಯಲ್ಲಿ ಹೆಚ್ಚಳ ಮತ್ತು ಆರ್ಥಿಕ ಬೆಳವಣಿಗೆ ಕಂಡಿತು. ಮೂಲಭೂತವಾಗಿ ವರ್ಸೈಲ್ಸ್ ಸಾರ್ವಜನಿಕ ಆಡಳಿತ, ಪ್ರವಾಸೋದ್ಯಮ, ವ್ಯಾಪಾರಿ ಸಮಾವೇಶಗಳು ಮತ್ತು ಉತ್ಸವಗಳ ಸ್ಥಳವಾಗಿ ಪ್ರಸಿದ್ಧವಾಗಿದೆ. ವರ್ಸೈಲ್ಸ್ ಒಂದು ಪ್ರಮುಖ ಸೇನಾ ಕೇಂದ್ರವೂ ಆಗಿದ್ದು, ಹಲವಾರು ಮಿಲಿಟರಿ ಘಟಕಗಳು ಮತ್ತು ತರಬೇತಿ ಶಾಲೆಗಳನ್ನು ಹೊಂದಿದೆ. ಇವುಗಳನ್ನೆಲ್ಲಾ ಕಾಣುತ್ತಾ, ವರ್ಸೈಲ್ಸ್ ಭೇಟಿ ಅವಿಸ್ಮರಣೀಯವಾಗಿ ಮನದಲ್ಲಿ ಉಳಿಯುತ್ತದೆ.

ಪ್ರತಿಕ್ರಿಯಿಸಿ: feedback@sudha.co.in